ತೀರ್ಥಹಳ್ಳಿಯ ತುಂಗಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುವ ಲಕ್ಷ್ಮೀನಾರಾಯಣ ಅವರು 'ಅಲಕ ತೀರ್ಥಹಳ್ಳಿ' ಹೆಸರಿನಲ್ಲಿ ಕನ್ನಡ ಸಾಹಿತ್ಯ ಲೋಕದಲ್ಲಿ ಪರಿಚಿತರು. ಶಿವಮೊಗ್ಗದ ಹೂಗೊಪ್ಪಲು ಅವರ ಹುಟ್ಟೂರು. ಕಾವ್ಯ ಮತ್ತು ನಾಟಕ ರಚನೆ ಅವರ ಆಸಕ್ತಿಯ ಕ್ಷೇತ್ರ. 'ಈ ಕಥೆಗಳ ಸಹವಾಸವೇ ಸಾಕು', 'ನವಿಲೆಸರ' (ಕಥಾ ಸಂಕಲನಗಳು) ಹಾಗೂ 'ಶಾಲಾ ಮಕ್ಕಳ ನಾಟಕಗಳು' (ಆರು ನಾಟಕಗಳ ಸಂಕಲನ) ಅವರ ಪ್ರಕಟಿತ ಕೃತಿಗಳು.

ಹೀಗೆ ನನ್ನನ್ನು ಎಕ್ಕ ಎಂದು ಕರೆದುಬಿಟ್ಟನೋ ಏನೋ ಪುಣ್ಯಾತ್ಮ, ನನ್ನನ್ನು ಎಕ್ಕನನ್ನೇ ಆಗಿಸಿಬಿಟ್ಟು ಹೋದ! ನಮ್ಮ ಆಫೀಸ್ನಲ್ಲಿ ಎಷ್ಟೊಂದು ಭಾಷೆ ಮಾತನಾಡುವವರಿದ್ದಾರೆ. ಎಲ್ಲರಿಗೂ ಅವರವರ ಭಾಷೆಯಲ್ಲಿ ಎಕ್ಕ ಎಂಬ ಪದಕ್ಕೆ ಒಂದೇ ಅರ್ಥ- ಒಂಟಿ ಎತ್ತಿನ ಗಾಡಿ! ಆದರೆ ಗುಣಶೀಲನ ಪರಿಚಯ ಆದ ದಿನದಿಂದಲೇ ನಾನು ಮತ್ತು ಅವನು ಜೋಡಿ ಎತ್ತುಗಳಾಗಿ ಬಿಟ್ಟಿದ್ದೆವು! ಅವನು ಹೆಣ್ಣು ನೋಡ್ಲಿಕ್ಕೆ ಹೋದಾಗ ಕಾರ್ ಡ್ರೈವರ್ ಅಂತಾನೇ ಪರಿಚಯ ಮಾಡಿಕೊಂಡವ ಅವನ ಮದುವೆ ಅಷ್ಟೇ ಅಲ್ಲ, ಮಗುವಿನ ನಾಮಕರಣದವರೆಗೂ ಹಾಗೇ ಪರಿಚಿತನಾಗಿ ಉಳಿದುಬಿಟ್ಟಿದ್ದೆ. ಕೊನೆಗೊಂದು ದಿನ, ಗುಣಶೇಖರನ ಮಾವ ಅದೇನೋ ವಿಷಯಕ್ಕೆ ನನಗೆ ಏಕವಚನದಲ್ಲಿ ಬೈದಾಗ ಗುಣ ನನ್ನ ಪರವಾಗಿ ಮಾತನಾಡಿ, ನನ್ನನ್ನು ಅವರಿಗಷ್ಟೇ ಅಲ್ಲ ಸವೇರಾಳಿಗೂ ಮತ್ತೊಮ್ಮೆ ಪರಿಚಯಿಸಿ ತನ್ನ ಕುಟುಂಬಕ್ಕೆ ಸೇರಿಸಿಕೊಂಡುಬಿಟ್ಟ! ಇಪ್ಪತ್ತು ವರ್ಷಗಳ ನನ್ನ ಏಳುಬೀಳುಗಳಲ್ಲಿ ನನ್ನೊಂದಿಗೆ ಇದ್ದ ಗುಣ ಹೀಗೆ ಮತ್ತೆ ನನ್ನನ್ನು ಎಕ್ಕನನ್ನಾಗಿಸಿ ಹೋಗಿಬಿಡುವುದೇ? ಕನಸಿನೊಳಗಿನ ಕನಸಿನಂತೆ! ಆಂಬುಲೆನ್ಸ್‌ನಲ್ಲಿ ಗುಣನ ಶವವನ್ನು ಅವರ ಕುಟುಂಬಕ್ಕೆ ಒಪ್ಪಿಸಿ, ಸವೇರಾಳ ತಂದೆಯ ಹತ್ತಿರ ಕೇಳಿದ್ದೆ, 'ಕ್ಷಮಿಸಿ, ನಿಮ್ಮ ಅಳಿಯನನ್ನು ಉಳಿಸಿಕೊಳ್ಳಲು ಕೊನೆಗೂ ಆಗಲಿಲ್ಲ... ನಾನು ಇನ್ನು ಏನಾದರೂ ಮಾಡುವುದಿದ್ದರೆ ಹೇಳಿ... ಯಾವ ಸಂಕೋಚವೂ ಬೇಡ'. ಆಗ ಅವರು ಹೇಳಿದ್ದು ಇಷ್ಟೇ: 'ಥ್ಯಾಂಕ್ಸ್, ಸಹಾಯ ಬೇಕಾದರೆ, ಫೋನ್ ಮಾಡ್ತೀವಿ'. ಆ ಸಂದರ್ಭದಲ್ಲಿ ಅಷ್ಟನ್ನೇ ಅವರು ಹೇಳಲು ಸಾಧ್ಯವಾಗಿರಬಹುದು. ಆದರೆ, ನನಗೆ ಯಾಕೋ ಅದು ಅಪಮಾನವೆಂದೇ ಅನ್ನಿಸಿಬಿಟ್ಟಿತು. ಪ್ರಾಣ ಸ್ನೇಹಿತನ ಸಾವು, ನನ್ನ ಸಾವು ಅನ್ನಿಸುವಷ್ಟು ಮಂಕು ಬಡಿದುಬಿಟ್ಟಿತ್ತು. ನನ್ನನ್ನ ಮತ್ತೆ ಬಡಿದು ಎಬ್ಬಿಸಿದ್ದು ಸವೇರಾ!

**ಸವೇರಾ ಮತ್ತು ಏಕಾಂಬರ:**

ಏಯ್! ಎಕ್ಕಾ, ಇದೇನಯ್ಯ, ಮಾವ ಹೇಳಿದ ಮಾತನ್ನು ಇಷ್ಟು ಸೀರಿಯಸ್ಸಾಗಿ ತಗೊಂಡು ಮನೆಗೆ ಬರೋದು ಹಾಳಾಗಲಿ, ಮೆಸೇಜ್ ಕೂಡ ಮಾಡೋಲ್ವಲ್ಲ. ವಾರ ಸರಿ. ತಿಂಗಳು ಓಕೇ ಅಂತಾನೇ ಇಟ್ಕೊಳ್ಳೋಣ... ಇದೇನೋ ಆರು ತಿಂಗಳಾಯ್ತು ಮನೆ ಕಡೆ ಮುಖಾ ಹಾಕ್ದೆ? ಇದು ನೀನು ಮಿತ್ರನಿಗೆ ಮಾಡ್ತಾ ಇರೋ ದ್ರೋಹ ಅಂತ ನಿಂಗೆ ಅನ್ನಿಸೋಲ್ವ? ನಾನು ಕಳಕೊಂಡಿದ್ದಕ್ಕಿಂತ ಹೆಚ್ಚಿನದೇನನ್ನ ನೀನು ಕಳಕೊಂಡಿದೀಯ ಹೇಳು? ನನ್ನ ಮಗ ಯಾವಾಗ್ಲೂ, ಎಕ್ಕು ಮಾಮ ಯಾಕಮ್ಮ ಬರ್ತಾ ಇಲ್ಲ ಅಂತ ದಿನಾ ಕೇಳಿ ಪೀಡಿಸ್ತಾನೆ... ಅವ್ನ ಕಾಟ ತಡೀಲಿಕ್ಕೆ ಆಗ್ದೇ, ತಿಂಗಳ ಹಿಂದೆ ಮಾವನಿಗೆ ಹೇಳಿದ್ದೆ. ಅದೇನೋ ನಿಮ್ಮ ಮೊಮ್ಮಗನ ಡಿಮ್ಯಾಂಡು ನೀವೇ ಕೇಳಿ ಪರಿಹಾರ ಮಾಡಿಯಪ್ಪಾ, ನಂಗಂತೂ ಯಾರ ಜೊತೆಗೂ ಮಾತು ಬೇಡ ಕತೇನೂ ಬ್ಯಾಡ ಅನ್ನಿಸ್ತಿದೆ ಅಂದಿದ್ದೆ. ಅವ್ರು ಮಾತಾಡಿದ್ರೋ ಬಿಟ್ರೋ ಗೊತ್ತಾಗಲಿಲ್ಲ. ಈಗ ಅವನು ಅಷ್ಟೆಲ್ಲ ಹಟ ಮಾಡಿ ಕೇಳೋಲ್ಲ. ಅದಿರ್ಲಿ ಬಿಡು. ನೋಡಪ್ಪಾ, ಮಾತಾಡ್ಬೇಕು ಅನ್ನಿಸಿದ್ರೆ ಮಾತಾಡು, ಇಲ್ಲ ಅಂದ್ರೆ ಮೆಸೇಜ್ ಮಾಡು, ಯಾವದೂ ಬೇಡಪ್ಪ ಅನ್ನಿಸಿದ್ರೆ ಹಂಗೆ ಸುಮ್ನಿದ್ಬಿಡು. ಮತ್ತೇನಯ್ಯಾ ಹೇಳ್ಲಿ?...

'ನೋಡು ಸವೇರಾ, ನನಗೆ, ನಿನ್ನ ಜೊತೆ ಮಾತನಾಡದೇ ಇರುವಂಥದ್ದು ಏನೂ ಆಗಿಲ್ಲ, ಆದರೂ ಮಾತಾಡಿಲ್ಲ ಅಂದ್ರೆ ನಿನಗೆ ಅರ್ಥ